ಆ) ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮವೇನು? ತೆಗೆದುಕೊಂಡ ಕ್ರಮ ಕಾರ್ಯ ರೂಪಕ್ಕೆ ಎಂದಿನಿಂದ ಬರುತ್ತದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಹೌದು

ಆ) ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳು

1356 (1570) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೊಡಗು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಾಲಯಗಳು ಸಂಖ್ಯೆ ಎಷ್ಟು?

2) ಆ ದೇವಾಲಯಗಳಿಗೆ ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ.

3) ಅದರಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ವರ ಮಾನವೆಷ್ಟು?

ಶ್ರೀ ಬಾಬುರಾವ್ ಚಿಂಚನಸೂರ (ಮುಜರಾಯಿ ರಾಜ್ಯ ಸಚಿವರು) :

1) ಕೊಡಗು ಜಿಲ್ಲೆಯಲ್ಲಿ ಒಟ್ಟು 7 ದೇವಾಲಯಗಳು ಮುಜರಾಯಿ ಇಲಾಖೆಗೆ ಸೇರಿರುತ್ತದೆ.

2) ಪ್ರತಿ ವರ್ಷ ರೂ.40000-00 ನಗದು ಅನುದಾನ ಸರ್ಕಾರದಿಂದ ಬಿಡುಗಡೆ ಮಾಡಲಾಗುತ್ತಿದೆ.

3) ಈ ದೇವಾಲಯಗಳಿಂದ ಯಾವುದೇ ವರಮಾನ ಸರ್ಕಾರಕ್ಕೆ ಬರುವುದಿಲ್ಲ. ಆಯಾ ದೇವಾಲಯಗಳಿಂದ ನಿತ್ಯಕಟ್ಲೆ ಹೆಚ್ಚು ಕಟ್ಲೆ ದೇವಲಾಯದ ನೌಕರರಿಗೆ ಸಂಬಳ ಕೊಡಲು ಹಾಗೂ ಅಭಿವೃದ್ಧಿ ಕಾರ್ಯಕ್ಕೆ ಉಪಯೋಗಿಸಲಾಗಿವುದು.

ಗೃಹ ಇಲಾಖೆಯಲ್ಲಿ ಪೇದೆ ಮತ್ತು ಮುಖ್ಯ ಪೇದೆಗಳಿಗೆ ಬಡ್ತಿ

1358 (1572) ಶ್ರೀ ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೃಹ ಇಲಾಖೆಯಲ್ಲಿ ಪೇದೆ ಮತ್ತು ಮುಖ್ಯ ಪೇದೆಗಳಿಗೆ ಯಾವ ಮಾನದಂಡದ ಆಧಾರದ ಮೇಲೆ

3) ಯೋಜನೆಯ ವೆಚ್ಚವನ್ನು ನಗರಸಭೆ, ಪುರಸಭೆ ಹಾಗೂ ಸರ್ಕಾರವು ಹಂಚಿಕೊಂಡು ಭರಿಸ ಬೇಕಾಗುತ್ತದೆ. ಈ ಯೋಜನೆಗೆ ತಗಲುವ ವೆಚ್ಚ ಹಾಗೂ ಯೋಜನೆಯ ಮುಕ್ತಾಯದ ದಿನಾಂಕ ಮುಂತಾದ ವಿವರಗಳು ಸರ್ಕಾರದಲ್ಲಿ ಇತ್ಯರ್ಥದ ಹಂತದಲ್ಲಿದೆ.

ಉತ್ತರಹಳ್ಳಿಯಲ್ಲಿ ಹಸಿರು ಕಾರ್ಡ್ ಮತ್ತು ಹಳದಿ ಕಾರ್ಡ್‌ಗಳ ಕುರಿತು

1353 (1567) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?